# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 507

ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಣ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 24.09.2020

ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸ | ವಿಷಯ | ಉತ್ತರ |
|---|---|---|
| ಅ | ಬೆಂಗಳೂರು ನಗರ ಸೇರಿದಂತೆ ಹಲವಾರು ಕಡೆ, ಪೊಲೀಸ್ ಠಾಣೆಗಳ ಮೇಲೆ ಹಾಗೂ ಸಾರ್ವಜನಿಕ ಆಸ್ತಿಗಳ ಮೇಲೆ ದಾಳಿಯಾಗಿ ನಷ್ಟ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಹಾಗಿದ್ದಲ್ಲಿ ಇದನ್ನು ಕಡಿವಾಣ ಹಾಕಲು ಸರ್ಕಾರದ ದಿಟ್ಟ ಕ್ರಮಗಳೇನು; ಸಾರ್ವಜನಿಕರು ತಮ್ಮ ಆಸ್ತಿಯ ನಷ್ಟ ಪರಿಹಾರಕ್ಕೆ ಕಛೇರಿಯಿಂದ ಮತ್ತೊಂದು ಕಛೇರಿಗೆ ಅಲೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಸಾರ್ವಜನಿಕರ ಆಸ್ತಿಗಳಿಗೆ ಧಕ್ಕೆ ಮಾಡುವವರ ವಿರುದ್ಧ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತದೆ.<br>1) ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವುದು.<br>2) ಇಂತಹ ಅಪರಾಧಗಳಲ್ಲಿ ಭಾಗಿಯಾಗುವ ಆರೋಪಿತರ ವಿರುದ್ಧ ರೌಡಿ ಹಾಳೆಗಳನ್ನು ತೆರೆದು ಸದರಿಯವರ ಚಲನ ವಲನಗಳ ಮೇಲೆ ನಿಗಾಯಿರಿಸಿ ಅಗತ್ಯ ಸಂದರ್ಭಗಳಲ್ಲಿ ವಶಕ್ಕೆ ಪಡೆದುಕೊಳ್ಳುವುದರೊಂದಿಗೆ ಸದರಿಯವರ ವಿರುದ್ದ ಮುಂಜಾಗ್ರತಾ ಕ್ರಮವಾಗಿ PAR (Preventive Action Report)ಗಳನ್ನು ದಾಖಲಿಸಲಾಗುವುದು.<br>ಉಳಿದಂತೆ ರಾಜ್ಯದಲ್ಲಿ ಸಾರ್ವಜನಿಕರಿಂದ ತಮ್ಮ ಆಸ್ಥಿ ನಷ್ಟದ ಪರಿಹಾರದ ಕುರಿತು ಇಲಾಖೆಯಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. |
| ಇ | ಇಂತಹ ದಾಳಿ ಬಗ್ಗೆ ಸರ್ಕಾರವು ಚುರುಕುತನದಿಂದ ಕೆಲಸ ಮಾಡಲು ಸರ್ಕಾರದ ಹಂತದಲ್ಲಿ ಏನಾದರೂ ಸಮಸ್ಯೆಗಳಿವೆಯೇ; ಸರ್ಕಾರ ಇದನ್ನು ತಡೆಗಟ್ಟುವಲ್ಲಿ ವಿಫಲವಾಗಿದ್ದು, ಈ ಬಗ್ಗೆ ಸರ್ಕಾರದ ಮುಂದಿನ ನಿಲುವುಗಳೇನು; | ರಾಜ್ಯದಲ್ಲಿ ವಿವಿಧ ಸಂಘಟನೆಗಳು ಹಾಗೂ ವ್ಯಕ್ತಿಗಳಿಂದ ನಡೆಸಲ್ಪಡುವ ಪ್ರತಿಭಟನೆ, ಧರಣಿಗಳ ಕುರಿತು ವಿವಿಧ ಮೂಲಗಳಿಂದ ಮಾಹಿತಿಯನ್ನು ಪಡೆದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ. |

| | | |
|---|---|---|
| ಈ | ರಾಜ್ಯದಲ್ಲಿ ಇತ್ತೀಚೆಗೆ ಅಪರಾಧ ಚಟುವಟಿಕೆಗಳು ಹೆಚ್ಚಾಗಿದ್ದು, ಎಲ್ಲೆಂದರಲ್ಲಿ ಕಳ್ಳತನ, ಕೊಲೆ, ಹಲ್ಲೆಗಳು ಎಗ್ಗಿಲ್ಲದೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಉ | ಇದರ ಬಗ್ಗೆ ಗುಪ್ತಚರ ಇಲಾಖೆಗೆ ಮಾಹಿತಿ ಇಲ್ಲವೇ ಅಥವಾ ಗೊತ್ತಿದ್ದು ಕಣ್ಣುಮುಚ್ಚಿ ಕುಳಿತುಕೊಂಡಿದೆಯೇ; | ಗಮನಕ್ಕೆ ಬಂದಿರುತ್ತದೆ. |
| ಊ | ಹಾಗಿದ್ದಲ್ಲಿ, ಜನರು ನಿರ್ಭಯವಾಗಿ ಓಡಾಡುವುದು ಯಾವಾಗ; ಸರ್ಕಾರವು ಈ ಬಗ್ಗೆ ಕೈಗೊಳ್ಳಲಿರುವ ಕಠಿಣ ಕ್ರಮಗಳೇನು; | ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ–ಅ** ದಲ್ಲಿ ನೀಡಲಾಗಿದೆ. |
| ಋ | ಪೊಲೀಸ್ ಬೀಟ್ ಅನ್ನು ಸರ್ಕಾರವು ಹೆಚ್ಚಿಸಿಲ್ಲವೇ: ಹೆಚ್ಚಿಸಿದ್ದಲ್ಲಿ, ಅಪರಾಧ ಚಟುವಟಿಕೆಗಳು ಹಗಲಿರುಳು ನಡೆಯುತ್ತಿರುವುದಕ್ಕೆ ಕಾರಣಗಳೇನು? | ರಾಜ್ಯದಲ್ಲಿ, ಅಪರಾಧಗಳನ್ನು ತಡೆಗಟ್ಟಲು ಹಗಲು, ರಾತ್ರಿ, ಗುಡ್ ಮಾರ್ನಿಂಗ್, ಲರ್ಕಿಂಗ್ ಹಾಗೂ ನ್ಯೂಸೆನ್ಸ್ ಬೀಟ್ ಗಳಿಗೆ ಸಿಬ್ಬಂದಿ / ಅಧಿಕಾರಿಯವರನ್ನು ನೇಮಕ ಮಾಡಲಾಗುತ್ತಿದೆ, ಹೊಸ ಬೀಟ್ ವ್ಯವಸ್ಥೆಯ ಸಂಖ್ಯಾವಾರು, ಜಿಲ್ಲಾವಾರು ವಿವರವನ್ನು **ಅನುಬಂಧ–ಆ** ದಲ್ಲಿ ನೀಡಲಾಗಿದೆ. |

**ಹೆಚ್‌ಡಿ 279 ಎಸ್‌ಎಸ್‌ಟಿ 2020**

**(ಬಸವರಾಜ ಬೊಮ್ಮಾಯಿ)**
**ಗೃಹ ಸಚಿವರು**

## ಅನುಬಂಧ-ಅ

## ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

- ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹೊಸ ಬೀಟ್ ಪದ್ಧತಿಯನ್ನು ಜಾರಿಗೆ ತರಲಾಗಿರುತ್ತದೆ.
- ಈ ಹೊಸ ಬೀಟ್ ಪದ್ಧತಿಯಲ್ಲಿ ಪ್ರತಿ ಪೊಲೀಸ್ ಠಾಣಾ ಸರಹದ್ದುಗಳ ಬೀಟ್ ಮತ್ತು ಉಪ-ಬೀಟ್‌ಗಳ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕ ಸಂಪರ್ಕ ಸಭೆಗಳನ್ನು ಮಾಡಿ ಅಪರಾಧ ತಡೆಗಟ್ಟಲು ಎಚ್ಚರ ವಹಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡಲಾಗಿದೆ.
- ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಚಾರಿ ನಿರ್ವಹಣೆ ಮತ್ತು ಅಪರಾಧ ಹಿನ್ನೆಲೆಯಿರುವ ಆಸಾಮಿಗಳ ಮೇಲೆ ನಿಗಾವಹಿಸುವ ಸಲುವಾಗಿ ಸರ್ಕಾರದ ವತಿಯಿಂದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲು ಇರಿಸಲಾಗುತ್ತಿದೆ. ಅಂಗಡಿಗಳು, ಮಾಲುಗಳು ಮತ್ತು ಪ್ರಮುಖ ವ್ಯಾಪಾರ ಕಟ್ಟಡಗಳ ಮಾಲೀಕರುಗಳು, ಪಬ್ಲಿಕ್ ಸೇಫ್ಟಿ ಕಾಯ್ದೆ ರೀತ್ಯಾ ಸಿ.ಸಿ.ಟಿ.ವಿ. ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ.
- ಸರಗಳ್ಳತನ ಮಾಡುವ ಎಮ್.ಓ.ಬಿ ಗಳ ಪರಿಶೀಲನೆ ತೀವ್ರಗೊಳಿಸಲಾಗಿದೆ. ಸರಗಳ್ಳತನ ನಡೆಯುವ ಅವಧಿ ಮತ್ತು ಪ್ರದೇಶಗಳನ್ನು ಗುರ್ತಿಸಿ ವಿಶೇಷ ಗಸ್ತು ಹಾಗೂ ನಾಕಾಬಂಧಿ ಏರ್ಪಡಿಸಲಾಗುತ್ತಿದೆ.
- ಎಂ.ಓ.ಬಿ. ಆಸಾಮಿಗಳು, ಪೂರ್ವಸಜಾ ಆಸಾಮಿಗಳು, ರೌಡಿ ಆಸಾಮಿಗಳನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಿ ಈ ಆಸಾಮಿಗಳ ವಿರುದ್ಧ ಕಲಂ 107, 109, 110 ಸಿಆರ್‌ಪಿಸಿ ರೀತ್ಯಾ ಭದ್ರತಾ ಕಾಯ್ದೆಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.
- ಅಪರಾಧ ತಡೆಗಟ್ಟಲು ಹಾಗೂ ಕಮ್ಯೂನಿಟಿ ಪೊಲೀಸಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.
- ಅಪರಾಧಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಕರಪತ್ರಗಳನ್ನು ಪ್ರಕಟಿಸಿ ವಿತರಿಸಲಾಗುತ್ತಿದೆ.
- ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆದು ಕಳ್ಳತನ ಮಾಡುವುದು, ಬಸ್‌ಗಳಲ್ಲಿ ಸೂಟ್‌ಕೇಸ್ ಕಳ್ಳತನ ಮಾಡುವವರ ಮೇಲೆ ಸೂಕ್ತ ಗಮನ ಹರಿಸುವಂತೆ ಸಾರ್ವಜನಿಕರಲ್ಲಿ ಹಾಗೂ ಪ್ರಯಾಣಿಕರಲ್ಲಿ ಮನವಿ ಮಾಡಲಾಗುತ್ತಿದೆ.
- ನೊಂದ ವ್ಯಕ್ತಿಗಳು ದೂರವಾಣಿ ಮೂಲಕ ನಿಸ್ತಂತು ಕೇಂದ್ರಕ್ಕೆ ಮಾಹಿತಿ ನೀಡುವ ಸಲುವಾಗಿ ಡಯಲ್-100 ದೂರವಾಣಿ ಸಂಪರ್ಕ, ಮಹಿಳೆಯರು ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಗಳಾಗಿ ದೂರವಾಣಿ ನಂಬರ್-1092 ಹಾಗೂ 1098 ಚಾಲನೆಯಲ್ಲಿರುತ್ತದೆ.
- ಅಪರಾಧ ಕೃತ್ಯಗಳಲ್ಲಿ ತೊಡಗಿರುವ ಜನರ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಅಪರಾಧಿಗಳ ಮೇಲೆ ಎಮ್‌ಓಬಿ ಹಾಗೂ ರೌಡಿ ಶೀಟ್ ತೆಗೆಯಲಾಗುವುದು ಹಾಗೂ ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಗಡಿಪಾರು ಮಾಡಲಾಗುವುದು.
- ದಿನದ 24 ಗಂಟೆ ಅಧಿಕಾರಿ ಸಿಬ್ಬಂದಿಯವರು ಗಸ್ತು ಕರ್ತವ್ಯವನ್ನು ಸರದಿ ಪ್ರಕಾರ ನಿರ್ವಹಣೆ ಮಾಡಲಾಗುತ್ತಿದೆ. ಆ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುವ ದರೋಡೆ
- ಸುಲಿಗೆ ಪ್ರಕರಣಗಳನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗಿರುತ್ತದೆ.
- ಅಲ್ಲದೇ ಸದರಿ ರಸ್ತೆಗಳಲ್ಲಿ ರಸ್ತೆ ಅಪಘಾತಗಳು ಸಂಭವಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಚಿಕಿತ್ಸೆಗೆ ಸಾಗಿಸಲು ಸಹಾಯಕವಾಗಿರುತ್ತದೆ.
- ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬ್ಯಾಂಕ್/ಎಟಿಎಂ/ಅಂಚೆ ಕಛೇರಿಗಳಲ್ಲಿ ಅಲಾರಂ ಸಿಸ್ಟಂ ಅಳವಡಿಸಿ ಹಾಗೂ ಕಡ್ಡಾಯವಾಗಿ ಸೆಕ್ಯೂರಿಟಿ ಗಾರ್ಡ್ ನೇಮಕ ಮಾಡಿಕೊಳ್ಳುವ ಬಗ್ಗೆ ಸಂಬಂಧಪಟ್ಟವರಿಗೆ ಪೊಲೀಸ್ ನೋಟೀಸ್ ನೀಡಿ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.
- ದೇವಸ್ಥಾನ/ಮಸೀದಿ/ಚರ್ಚ್/ಬ್ಯಾಂಕ್/ಎಟಿಎಂ/ಜ್ಯೂಯಲರಿ ಶಾಪ್ ಮತ್ತು ಸೈಬರ್ ಸೆಂಟರ್‌ಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಕ್ಯಾಮೆರಾ ಅಳವಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಹಾಗೂ ಈ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ಕೂಡ ಜಾರಿ ಮಾಡಲಾಗಿರುತ್ತದೆ. ಮತ್ತು ಸಂಬಂಧಪಟ್ಟ ಮಾಲೀಕರುಗಳಿಗೆ Burglary Alarm ಅಳವಡಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.
- ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್ಸ್ಟಾಗ್ರಾಂ, ಪೊಲೀಸ್ ವೆಬ್‌ಸೈಟ್‌ಗಳನ್ನು ಬಳಸಿ ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಬಗ್ಗೆ, ಅಪರಾಧಿಕ ಕೃತ್ಯಗಳ ಬಗ್ಗೆ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

- ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯ ಮಾಲೀಕರುಗಳು ತಮ್ಮ ಮನೆಯನ್ನು ಬಾಡಿಗೆಗೆ ಕೊಡುವಾಗ ಬಾಡಿಗೆದಾರರ ಪೂರ್ವಪರಗಳನ್ನು ವಿಚಾರ ಮಾಡಿ ನೈಜ ದಾಖಲಾತಿಗಳೊಂದಿಗೆ ಮನೆ ಬಾಡಿಗೆಗೆ ಕೊಡುವುದು ಹಾಗೂ ಬಾಡಿಗೆದಾರರ ಮನೆಗೆ ಬಂದು-ಹೋಗುವವರ ಮೇಲೆ ನಿಗಾ ಇಡಲು ನಾಗರೀಕ ಸದಸ್ಯರ ಸಭೆಯಲ್ಲಿ ಕೋರಲಾಗಿರುತ್ತದೆ.
- ಸೈಬರ್ ವಂಚನೆ ಮತ್ತು ದುರುಪಯೋಗ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಪರಿಹರಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ರಾಜ್ಯದ ಪ್ರತಿ ಘಟಕದಲ್ಲಿ ಒಂದರಂತೆ ಹಾಗೂ ಬೆಂಗಳೂರು ನಗರದ ಎಲ್ಲಾ 8-ವಿಭಾಗಗಳಲ್ಲಿ ಪ್ರತ್ಯೇಕವಾಗಿ ಸೈಬರ್ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ.
- ಸೈಬರ್ ಪ್ರಕರಣಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅವಶ್ಯಕ ಸಿಬ್ಬಂದಿ ಮತ್ತು ಸಮರ್ಥ ತಂತ್ರಜ್ಞಾನಗಳನ್ನು ಮತ್ತು ಸಿಬ್ಬಂದಿಗಳಿಗೆ ಅಗತ್ಯ ತರಬೇತಿಯನ್ನು ನೀಡಲಾಗಿರುತ್ತದೆ.
- ಸೈಬರ್ ಅಪರಾಧ/ವಂಚನೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಈಗಾಗಲೇ ಚುಟುಕು ವಿಡಿಯೋಗಳನ್ನು ಫೇಸ್‌ಬುಕ್ ಹಾಗು ಜಾಲತಾಣಗಳಲ್ಲಿ ಅಳವಡಿಸಲಾಗಿದೆ.
- ಮಹಿಳೆಯ ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಸಹಾಯವಾಣಿ, ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ, ಮತ್ತು ಸ್ಪಂದನ ಸಹಾಯವಾಣಿಗಳನ್ನು ಸ್ಥಾಪಿಸಲಾಗಿರುತ್ತದೆ.
- ಸಾರ್ವಜನಿಕ ಸಹಾಯಕ್ಕಾಗಿ "ಸುರಕ್ಷಾ" ಎಂಬ ಮೊಬೈಲ್ ಅಪ್ಲಿಕೇಷನ್ ಅನ್ನು ಪರಿಚಯಿಸಲಾಗಿದೆ.
- ರಾಜ್ಯದ ಪ್ರತಿ ಪೊಲೀಸ್ ಠಾಣೆಗಳಲ್ಲಿ ಮಹಿಳೆಯರ ದೂರು ವಿಚಾರಣೆ ಬಗ್ಗೆ ಪ್ರತ್ಯೇಕವಾಗಿ ಮಹಿಳಾ ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗಿದೆ.
- ಬೆಂಗಳೂರು ನಗರದಲ್ಲಿ ದಿನದ 24 ಗಂಟೆಯೂ ಸಹ ಮಹಿಳೆಯರ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಎಂಬ ಗಸ್ತುವಾಹನ ಗಸ್ತು ಕಾರ್ಯ ನಿರ್ವಹಿಸುತ್ತಿವೆ.
- ಅದೇ ರೀತಿಯಾಗಿ ರಾಜ್ಯದ ಇತರೆ ಘಟಕಗಳಲ್ಲಿ ಸಹ ಗಸ್ತು ಪಡೆಗಳು ಕಾರ್ಯನಿರ್ವಹಿಸುತ್ತಿದೆ.
- ವಯೋವೃದ್ಧರು, ಒಂಟಿ ಮಹಿಳೆಯರು ನೆಲೆಸಿರುವ ಬಗ್ಗೆ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಸರ್ವೆ ನಡೆಸಿ ಠಾಣಾ ಸರಹದ್ದಿನಲ್ಲಿರುವ ಒಂಟಿ ಮಹಿಳೆಯರನ್ನು ಗುರುತಿಸಿ ಇವರುಗಳ ಬಗ್ಗೆ ಸೂಕ್ತ ಗಮನ ನೀಡುವಂತೆ ಸೂಚನೆಗಳನ್ನು ನೀಡಲಾಗಿದ್ದು, ಇಂತಹ ಮನೆಗಳಿಗೆ ಸೈರನ್ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.
- ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ & ಮಾರಾಟ ತಡೆಗಟ್ಟಲು ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರಲ್ಲಿ ಹರಿವು ಮೂಡಿಸಲು ಮಾದಕ ವಸ್ತುಗಳ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ರಹಸ್ಯ ಮಾಹಿತಿಯನ್ನು 1908 (ಟೋಲ್ ಫ್ರೀ) ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಲಾಗಿರುತ್ತದೆ.
- ಪೊಲೀಸ್ ಠಾಣೆಯ ಅಪರಾಧ ಸಿಬ್ಬಂಗಳಿಗೆ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಹಳೆ ಎಂ.ಓ.ಬಿ ಆಸಾಮಿಗಳು, ರೌಡಿ ಆಸಾಮಿಗಳ ಬಗ್ಗೆ ಮಾಹಿತಿ ಪಡೆದುಕೊಂಡು ಅವರುಗಳ ಮೇಲೆ ಸೂಕ್ತ ನಿಗಾ ಇಡಲಾಗುತ್ತಿರುತ್ತದೆ.
- ಪೊಲೀಸ್ ಅಧಿಕಾರಿಗಳು ಸಾರ್ವಜನಿಕರೊಂದಿಗೆ ಜನಸಂಪರ್ಕ ಸಭೆ, ಶಾಂತಿ ಸಭೆಗಳನ್ನು ನಡೆಸುತ್ತಿದ್ದು, ಸಾರ್ವಜನಿಕರೊಂದಿಗೆ ಮಾಹಿತಿ ವಿನಿಮಯ ಮಾಡಿಕೊಂಡು ಅಪರಾಧಗಳು ಜರುಗದಂತೆ ಕ್ರಮಕೈಗೊಳ್ಳಲಾಗಿರುತ್ತದೆ.
- ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹಾಗೂ ಅಪರಾಧಗಳ ಬಗ್ಗೆ ಅರಿವು ಮೂಡಿಸಲು ಪ್ರತೀ ವರ್ಷ ಡಿಸೆಂಬರ್ ಮಾಹೆಯಲ್ಲಿ ಅಪರಾಧ ತಡೆ ಮಾಸಾಚರಣೆಯನ್ನು ಮಾಡುವ ಮೂಲಕ ಸಾರ್ವಜನಿಕರಿಗೆ, ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ.
- ಪ್ರತೀ ವರ್ಷ ಜನವರಿ ಮಾಹೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಗಳನ್ನು ಪ್ರತೀ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಮ್ಮಿಕೊಂಡು ಅಪಘಾತ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಹಾಗೂ ಸುಗಮ ಸಂಚಾರಕ್ಕೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ಸಾರ್ವಜನಿಕರಿಗೆ, ಚಾಲಕರುಗಳಿಗೆ, ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ.
- ವೈಜ್ಞಾನಿಕ ಹಾಗೂ ತಾಂತ್ರಿಕ ಕಂಪ್ಯೂಟರ್ ಅಪ್ಲಿಕೇಷನ್‌ಗಳನ್ನು ತನಿಖೆಯಲ್ಲಿ ಹಾಗೂ ಅಪರಾಧಗಳನ್ನು ತಡೆಗಟ್ಟಲು ಬಳಸಿಕೊಳ್ಳಲಾಗುತ್ತಿದೆ

**ಅನುಬಂಧ-೩** (8)

ರಾಜ್ಯದಲ್ಲಿ ಹೊಸ ಬೀಟ್ ವ್ಯವಸ್ಥೆಯ ಸಂಖ್ಯೆ ಜಿಲ್ಲಾವಾರು ವಿವರಗಳು

| ಕ್ರಸ | ಘಟಕ | ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 3046 |
| 2. | ಮೈಸೂರು ನಗರ | 1292 |
| 3. | ಹುಬ್ಬಳ್ಳಿ-ಧಾರವಾಡ | 1020 |
| 4. | ಮಂಗಳೂರು ನಗರ | 756 |
| 5. | ಬೆಳಗಾವಿ ನಗರ | 791 |
| 6. | ಕಲಬುರಗಿ ನಗರ | 375 |
| 7. | ಬೆಂಗಳೂರು | 991 |
| 8. | ತುಮಕೂರು | 1294 |
| 9. | ಕೋಲಾರ | 464 |
| 10. | ರಾಮನಗರ | 466 |
| 11. | ಚಿಕ್ಕಬಳ್ಳಾಪುರ | 0 |
| 12. | ಕೆ.ಜಿ.ಎಫ್. | 294 |
| 13. | ಮೈಸೂರು | 1009 |
| 14. | ಮಂಡ್ಯ | 1009 |
| 15. | ಹಾಸನ | 961 |
| 16. | ಕೊಡಗು | 560 |
| 17. | ಚಾಮರಾಜನಗರ | 642 |
| 18. | ಬೆಳಗಾವಿ ಜಿಲ್ಲೆ | 1153 |
| 19. | ವಿಜಯಾಪುರ | 854 |
| 20. | ಧಾರವಾಡ | 327 |
| 21. | ಬಾಗಲಕೋಟೆ | 626 |
| 22. | ಗದಗ | 389 |
| 23. | ಚಿತ್ರದುರ್ಗ | 937 |
| 24. | ಹಾವೇರಿ | 635 |
| 25. | ಶಿವಮೊಗ್ಗ | 1125 |
| 26. | ದಾವಣಗೆರೆ | 802 |
| 27. | ದಕ್ಷಿಣ ಕನ್ನಡ | 489 |
| 28. | ಉತ್ತರ ಕನ್ನಡ | 1110 |
| 29. | ಚಿಕ್ಕಮಗಳೂರು | 907 |
| 30. | ಉಡುಪಿ | 268 |
| 31. | ಬಳ್ಳಾರಿ | 1364 |
| 32. | ಕಲಬುರಗಿ | 0 |
| 33. | ಬೀದರ್ | 859 |
| 34. | ರಾಯಚೂರು | 911 |
| 35. | ಕೊಪ್ಪಳ | 518 |
| 36. | ಯಾದಗಿರಿ | 444 |
| ಒಟ್ಟು | | 28688 |